# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

ಸಂಖ್ಯೆ:KSEAB/DPIE/A8/2/2024/27336 ದಿನಾಂಕ:15.05.2024

## :: ಸುತ್ತೋಲೆ ::

ವಿಷಯ: - 2023-24ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆ-1ಕ್ಕೆ ನೋಂದಾಯಿಸಿಕೊಂಡು ಹಾಜರಾತಿ ಕೊರತೆಯಿಂದಾಗಿ ಪರೀಕ್ಷೆಯಿಂದ ಹೊರಗುಳಿದ 15ವರ್ಷ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ 2024ರ ಪರೀಕ್ಷೆ-2ಕ್ಕೆ ಖಾಸಗಿ ಅಭ್ಯರ್ಥಿಯಾಗಿ (CCEPF) ಪರೀಕ್ಷೆ ಬರೆಯಲು ನೋಂದಣಿಗೆ ಅವಕಾಶ ಕಲ್ಪಿಸಿರುವ ಕುರಿತು.

ಉಲ್ಲೇಖ:- 1.ಇಆಫೀಸ್ ಕಡತ ಸಂಖ್ಯೆ:27336 ರಲ್ಲಿ ನೀಡಿರುವ ಅನುಮೋದನೆ ದಿನಾಂಕ:14.05.2024

2.ಈ ಕಛೇರಿ ಮಾರ್ಗಸೂಚಿ ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ. ಅಧಿ/ಮಾರ್ಚ್-24/14/2023-24 ದಿ:04.10.2023.

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ಕಾಯ್ದೆ-1966 ನಿಯಮ-37ರನ್ವಯ ಶಾಲಾ ವಿದ್ಯಾರ್ಥಿಯಾಗಿ ಎಸ್ಎಸ್ಎಲ್‌ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಶಾಲೆಯು ಕಾರ್ಯ ನಿರ್ವಹಿಸಿದ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ. 2023-24ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆ-1ಕ್ಕೆ ನೋಂದಾಯಿಸಿಕೊಂಡು, ಹಾಜರಾತಿ ಕೊರತೆಯಿಂದಾಗಿ ರಾಜ್ಯಾದಂತ ಅಂದಾಜು 26,692 ವಿದ್ಯಾರ್ಥಿಗಳ ನೋಂದಣಿಯನ್ನು ಮುಖ್ಯ ಶಿಕ್ಷಕರು ಶಾಲಾ ಹಂತದಲ್ಲಿ ರದ್ದುಪಡಿಸಲಾಗಿರುವುದರಿಂದ ಸದರಿ ವಿದ್ಯಾರ್ಥಿಗಳು 2024ರ ಪರೀಕ್ಷೆ-1 ಕ್ಕೆ ಹಾಜರಾಗಲು ಸಾಧ್ಯವಾಗಿರುವುದಿಲ್ಲ.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಸದರಿ ವಿದ್ಯಾರ್ಥಿಗಳು ಮುಂದಿನ ಉನ್ನತ ಶಿಕ್ಷಣದ ವ್ಯಾಸಂಗದಿಂದ ವಂಚಿತರಾಗದಂತೆ ಕ್ರಮವಹಿಸುವ ಸಲುವಾಗಿ, ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ಜೂನ್-2024ರ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆ-2ಕ್ಕೆ ಖಾಸಗಿ ಅಭ್ಯರ್ಥಿಗಳಾಗಿ (CCEPF) ಪರೀಕ್ಷೆಗೆ ಆನ್‌ಲೈನ್ ಮೂಲಕ ಮುಖ್ಯೋಪಾಧ್ಯಾಯರ ಲಾಗಿನಲ್ಲಿ **Registration for SSLC-2024 Exam-2 Menu** ನಲ್ಲಿ **Registration For Private Freshಯೆಂಬ Sub-Menu** ಬಳಸಿ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖಿತ-2ರ ಮಾರ್ಗಸೂಚಿಯಲ್ಲಿ ಖಾಸಗಿ ಅಭ್ಯರ್ಥಿಗಳಾಗಿ ನೋಂದಣಿ ಮಾಡಿಕೊಳ್ಳಲು ವಿಧಿಸಿರುವ ಷರತ್ತುಗಳನ್ನು ಈ ಎಲ್ಲಾ ಅರ್ಹ ವಿದ್ಯಾರ್ಥಿಗಳು ಪಾಲಿಸಬೇಕಾಗಿರುತ್ತದೆ. 2024ರ ಪರೀಕ್ಷೆ-2ರಲ್ಲಿ ಈ ಅಭ್ಯರ್ಥಿಗಳಿಗೆ ಪ್ರಥಮ ಪ್ರಯತ್ನವಾಗಿರುತ್ತದೆ, ಈ ಪರೀಕ್ಷೆಯಿಂದ ಸತತ ಆರು ಪ್ರಯತ್ನಗಳ ಒಳಗಾಗಿ ಉತ್ತೀರ್ಣ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಅವಕಾಶದ ನಂತರವೂ ಪೂರ್ಣಗೊಳಿಸಲಾಗದ (NOT COMPLETED) ಅಭ್ಯರ್ಥಿಗಳು ನಂತರದ ಪರೀಕ್ಷೆಯಿಂದ ನಿಯಮಾನುಸಾರ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಎಲ್ಲಾ ವಿಷಯಗಳ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ವಿದ್ಯಾರ್ಥಿಗಳು

ಮಾರ್ಚ್-2024ರ ಪರೀಕ್ಷೆ-1 ಕ್ಕೆ ನೋಂದಾಯಿಸಿ ಈಗಾಗಲೇ ಪರೀಕ್ಷಾ ಶುಲ್ಕ ಪಾವತಿಸಿರುತ್ತಾರೆ. ಆದ್ದರಿಂದ ಸದರಿ ಅಭ್ಯರ್ಥಿಗಳು 2024ರ ಪರೀಕ್ಷೆ-2 ಕ್ಕೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿ ಪರೀಕ್ಷೆಗೆ ಹಾಜರಾಗಲು ನೋಂದಣಿ ಶುಲ್ಕವನ್ನು ಮಾತ್ರ ಪಾವತಿಸತಕ್ಕದ್ದು. ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರು ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಲು ಇರುವ ನಿಯಮದಂತೆ ತಮ್ಮ ಶಾಲಾ ಅಭ್ಯರ್ಥಿಗಳನ್ನು ನೋಂದಾಯಿಸಿ ಕೆಳಕಂಡ ದಿನಾಂಕದೊಳಗೆ ಆನ್ ಲೈನ್ ಮುಖಾಂತರ ಶುಲ್ಕ ಪಾವತಿಸಲು ತಿಳಿಸಿದೆ.

## ನೋಂದಣಿ ಶುಲ್ಕದ ವಿವರ

| ಕ್ರ ಸಂ | ವಿವರ | ಶುಲ್ಕದ ವಿವರ ರೂ ಗಳಲ್ಲಿ |
|---|---|---|
| 01 | ಮಾರ್ಚ್-2024ರ ಪರೀಕ್ಷೆ-1 ಕ್ಕೆ ನೋಂದಾಯಿಸಿಕೊಂಡು ಹಾಜರಾತಿ ಕೊರತೆ ಇರುವ ಕಾರಣ 2024ರ ಪರೀಕ್ಷೆ-2ಕ್ಕೆ ಖಾಸಗಿ ಅಭ್ಯರ್ಥಿಯಾಗಿ (CCEPF) ಹಾಜರಾಗಲು ನೋಂದಣಿ ಶುಲ್ಕ ಹಾಗೂ ಅರ್ಜಿ ಶುಲ್ಕ | ರೂ.225/- (ಪ್ರತಿ ಅಭ್ಯರ್ಥಿಗೆ) |

### ನೋಂದಣಿಗೆ ಮತ್ತು ಪರೀಕ್ಷಾ ಶುಲ್ಕ ಪಾವತಿಗೆ ನಿಗಧಿಪಡಿಸಿದ ದಿನಾಂಕ

| ಕ್ರ ಸಂ | ವಿವರ | ನಿಗಧಿಪಡಿಸಿದ ದಿನಾಂಕ |
|---|---|---|
| 01 | ಮಾರ್ಚ್-2024ರ ಪರೀಕ್ಷೆ-1ಕ್ಕೆ ನೋಂದಾಯಿಸಿಕೊಂಡು ಹಾಜರಾತಿ ಕೊರತೆಯಿಂದಾಗಿ ಜೂನ್-2024ರ ಪರೀಕ್ಷೆ-2ಕ್ಕೆ ಹಾಜರಾಗುವ ಖಾಸಗಿ ಅಭ್ಯರ್ಥಿಗಳ (CCEPF) ನೋಂದಣಿ ಮತ್ತು ಆನ್ ಲೈನ್ ಮುಖಾಂತರ ವಿವರಗಳನ್ನು ಅಪ್ ಲೋಡ್ ಮಾಡುವುದಕ್ಕೆ ನಿಗದಿಪಡಿಸಿರುವ ದಿನಾಂಕ | ದಿನಾಂಕ:15.05.2024 ರಿಂದ 18.5.2024ರ ಸಂಜೆ 5.30 ರವರೆಗೆ |
| 02 | NEFT ಚಲನ್ ಮೂಲಕ ಬ್ಯಾಂಕ್ ಗೆ ಶುಲ್ಕ ಪಾವತಿಸುವುದಕ್ಕೆ ನಿಗದಿಪಡಿಸಿರುವ ದಿನಾಂಕ | ದಿನಾಂಕ:20.05.2024 ರಿಂದ 21.05.2024 |

**ಸೂಚನೆ:-** ನೋಂದಣಿ ಶುಲ್ಕವನ್ನು ಈ ಸುತ್ತೋಲೆಯೊಂದಿಗೆ ಅನುಬಂಧಿಸಿರುವ ಮಂಡಲಿಯ NEFT ಚಲನ್ ನಲ್ಲಿ ಭರ್ತಿಮಾಡಿ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಜಮೆ ಮಾಡಿ ಮೂಲ ಪ್ರತಿ ಮತ್ತು ನಾಮಿನಲ್ ರೋಲ್ ನ್ನು ಸಂಬಂಧಪಟ್ಟ ಪರಿಶೀಲನಾ ಶಾಖೆಯ ಶಾಖಾಧಿಕಾರಿಗಳಿಗೆ **ದಿನಾಂಕ:23.05.2024ರೊಳಗೆ** ತಲುಪುವಂತೆ ಕಳುಹಿಸತಕ್ಕದ್ದು. NEFT ಚಲನ್ ನಲ್ಲಿ Beneficiary A/c Number ಕೆಳಕಂಡ ಉದಾಹರಣೆಯಂತೆ ನಮೂದಿಸುವುದು.

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 1 | 4 | 9 | 5 | 9 | P | F | 0 | 0 | 0 | 0 | A | X | 0 | 0 | 1 | 8 | S | 1 | 6 |

**AX0018** ಎನ್ನುವುದು ಶಾಲಾ ಸಂಕೇತವಾಗಿರುತ್ತದೆ. ಸದರಿ ಖಾಲಂನಲ್ಲಿ ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಶಾಲೆಯ ಶಾಲಾ ಸಂಕೇತವನ್ನು ಮಾತ್ರ ನಮೂದಿಸುವುದು. ಉಳಿದಂತೆ ಚಲನ್ ನಲ್ಲಿ ಯಾವುದೇ ಬದಲಾವಣೆ ಮಾಡತಕ್ಕದಲ್ಲ.

ಮೇಲ್ಕಂಡ ಅಂಶಗಳ ಕುರಿತು ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ ಮುಖ್ಯೋಪಾಧ್ಯಾಯರ ಮುಖಾಂತರ ವಿದ್ಯಾರ್ಥಿಗಳ / ಪೋಷಕರ ಗಮನಕ್ಕೆ ತಂದು ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಲು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಲು ಈ

ಮೂಲಕ ಸೂಚಿಸಿದೆ. ಅಂತಿಮ ದಿನಾಂಕದ ನಂತರ ನೋಂದಣಿಗೆ ಅವಕಾಶವಿರುವುದಿಲ್ಲ, ಒಂದು ವೇಳೆ ಅಂತಿಮ ದಿನಾಂಕದ ನಂತರವೂ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸ್ಪಷ್ಟಪಡಿಸಿದೆ.

ಎನ್.ಮಂಜುಶ್ರೀ., ಭಾ.ಆ.ಸೇ

ಅಧ್ಯಕ್ಷರು

ಕ.ಶಾ.ಪ.ಮೌ.ನಿ ಮಂಡಲಿ

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ ರವರಿಗೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ .
3. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರಿಗೆ (ಸಂಬಂಧಪಟ್ಟ ಬಿಇಓ ರವರ ಮುಖಾಂತರ)
4. ಶಾಖಾಧಿಕಾರಿಗಳು, ಗಣಕಶಾಖೆರವರಿಗೆ ಕಳುಹಿಸುತ್ತಾ, ಮಂಡಳಿ ಜಾಲತಾಣ ಮತ್ತು ಶಾಲಾ ಲಾಗಿನ್ ನಲ್ಲಿ ಪ್ರಕಟಿಸಲು ತಿಳಿಸಿದೆ.
5. ಮಂಡಳಿಯ ಎಲ್ಲಾ ಪರಿಶೀಲನಾ ಶಾಖೆಯ ಶಾಖಾಧಿಕಾರಿಗಳಿಗೆ ಮತ್ತು ಶಾಖಾಧಿಕಾರಿಗಳು "ಸಿ" ಶಾಖೆ ರವರಿಗೆ ಮಾಹಿತಿಗಾಗಿ.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರುರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಅಧ್ಯಕ್ಷರು, ಕ.ಶಾ.ಪ.ಮೌ.ಮಂಡಲಿ, ಬೆಂಗಳೂರುರವರ ಆಪ್ತ ಶಾಖೆಗೆ ಮಾಹಿತಿಗಾಗಿ.
5. ಕಛೇರಿ ಪ್ರತಿ.

## BANK COPY

(For SSLC Exam Related Services Only)
(Union Bank of India branches have to use CMS menu and Client Code is KSE4959)

## NEFT CHALLAN

(National Electronic Fund Transfer)

| | |
|---|---|
| Name of the Bank & Branch | |
| Name of the Beneficiary | **Director, (Exams)<br>Karnataka Secondary Education<br>Examination Board, Malleswaram, Bangalore-3.** |
| Beneficiary Bank & Branch | **Union Bank of India, FCS Branch,<br>21/1, Mission Road, Bangalore-560 027** |
| IFSC Code: | **UBIN0996335** |
| Type of A/c: | **Savings Bank** |
| **Beneficiary A/c Number** | |
| 1 4 9 5 9 P F 0 0 0 0 _ _ _ _ _ _ S 1 6 | |
| Amount: | Rs. (in words ) |
| Date of Deposit: | |
| Name of the Remitting Person/ School, Code & Address: | |
| Purpose of Fee Remitted: | |
| To be filled in by Bank Ref / TSL No. with Bank Seal | |

**INSTRUCTIONS TO THE REMITTER**

**01. Beneficiary Account Number 15 Digits to be filled by remitter.**

**02. If code numbers are less than 12 digits then prefix zero**

**Example : For Students - if Registration no is 20200155306, then write 020200155306**

**For Schools - if School Code is AN0016, then write 000000AN0016**

**For Teachers - Mention your 12 digits AE Code**

**03. 18th box is always 'S', For 19th and 20th digits - write Purpose Code of fee.**

## REMITTER COPY

(For SSLC Exam Related Services Only)
(Union Bank of India branches have to use CMS menu and Client Code is KSE4959)

## NEFT CHALLAN

(National Electronic Fund Transfer)

| | |
|---|---|
| Name of the Bank & Branch | |
| Name of the Beneficiary | **Director, (Exams)<br>Karnataka Secondary Education<br>Examination Board, Malleswaram, Bangalore-3.** |
| Beneficiary Bank & Branch | **Union Bank of India, FCS Branch,<br>21/1, Mission Road, Bangalore-560 027** |
| IFSC Code: | **UBIN0996335** |
| Type of A/c: | **Savings Bank** |
| **Beneficiary A/c Number** | |
| 1 4 9 5 9 _ _ _ _ _ _ _ _ _ _ _ _ S _ _ | |
| Amount: | Rs. (in words ) |
| Date of Deposit: | |
| Name of the Remitting Person/ School, Code & Address: | |
| Purpose of Fee Remitted: | |
| To be filled in by Bank Ref / TSL No. with Bank Seal | |

**ಪಾವತಿದಾರರಿಗೆ ಸೂಚನೆಗಳು :**

1. **Beneficiary A/C Number** 15 ಅಂಕಿಗಳನ್ನು ನಮೂದಿಸಬೇಕು. (ನೊಂದಣಿ ಸಂಖ್ಯೆ/ಶಾಲಾ ಸಂಕೇತ/AE ಕೋಡ್) ನೋಂದಣಿ ಸಂಖ್ಯೆ 12 ಅಂಕಿಗಳಿಗಿಂತ ಕಡಿಮೆ ಇದ್ದರೆ, ಆ ಸಂಖ್ಯೆಯ ಹಿಂದೆ ಸೊನ್ನೆ ಸೇರಿಸಿ.
   ಉದಾಹರಣೆ: 1) ವಿದ್ಯಾರ್ಥಿಗಳು– ನೊಂದಣಿ ಸಂಖ್ಯೆ 20120155306 ಇದ್ದಲ್ಲಿ 020120155306 ಎಂದು ನಮೂದಿಸಿ.
   2) ಶಾಲೆಗಳು–ಶಾಲಾ ಸಂಕೇತ AN0016 ಇದ್ದಲ್ಲಿ, 000000AN0016 ಎಂದು ನಮೂದಿಸಿ.
   3) ಶಿಕ್ಷಕರು ತಮ್ಮ 12 ಅಂಕಿಗಳ AE ಕೋಡ್ ನಮೂದಿಸಬೇಕು.
2. 18 ನೇ ಅಂಕಿ ಯಾವಾಗಲು 'S' ಎಂದು ಮೊದಲೇ ಮುದ್ರಿತವಾಗಿದೆ. ಇದರ ಮುಂದೆ 19 ಮತ್ತು 20ನೇ ಅಂಕಿಯಾಗಿ ಶುಲ್ಕ ಪಾವತಿಯ ಉದ್ದೇಶದ ಕೋಡ್ ನಮೂದಿಸಿ. (ವಿವಿಧ ಶುಲ್ಕಗಳ ಪಾವತಿಯ ಉದ್ದೇಶಗಳ ಕೋಡ್ ತಿಳಿಯಲು ಚಲನ್ ಹಿಂಭಾಗದಲ್ಲಿ ಮುದ್ರಿಸಿರುವ ಮಾಹಿತಿಯನ್ನು ಗಮನಿಸಿ.)